# ನಗರಸಭಾ ಕಾರ್ಯಾಲಯ, ರಾಮನಗರ

ನಸರಾ/ತಾವಿ/ಟೆಂಡರ್/ಸಿಆರ್/3/2010–11 ದಿ: 16.06.2010

## ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಮತ್ತು ನಗರಸಭೆಯಲ್ಲಿ 2010–11 ನೇ ಸಾಲಿನಲ್ಲಿ ನೋಂದಣಿ ಮಾಡಿಕೊಂಡ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ 2010–11 ನೇ ಸಾಲಿನ ನಗರಸಭಾ ನಿಧಿಯಡಿಯಲ್ಲಿ ಕೆಳಕಂಡ ಕ್ರ.ಸಂ. 1 ರಿಂದ 4 ಮತ್ತು 6 ರ ಕಾಮಗಾರಿಗಳಿಗೆ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರಿಂದ ಹಾಗು ಕ್ರ.ಸಂ.5 ರ ಕಾಮಗಾರಿಗೆ ವಿದ್ಯುತ್ ಗುತ್ತಿದಾರರಿಂದ ಐಟಂವಾರು ಟೆಂಡರ್‌ಗಳನ್ನು ದ್ವಿಪ್ರತಿಗಳಲ್ಲಿ ಲೋಕೋಪಯೋಗಿ ಇಲಾಖೆಯ ಹಾಗು ಆರ್ಥಿಕ ಇಲಾಖೆಯ K/W-1 ನಮೂನೆಯಲ್ಲಿ ಪೌರಾಯುಕ್ತರು ನಗರಸಭೆ, ರಾಮನಗರ ಇವರಿಂದ ಆಹ್ವಾನಿಸಲಾಗಿದೆ.

1. ಗುತ್ತಿಗೆದಾರರು ಸಂಬಂಧಿಸಿದ ಗುತ್ತಿಗೆ ನೋಂದಣಿ ಪ್ರತಿಯೊಂದಿಗೆ ಹಾಗು ಇತ್ತೀಚೆಗೆ ಆದಾಯ ತೆರಿಗೆ ತೀರುವಳಿ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಇಲಾಖೆಗಳಿಂದ ಪಡೆದು ಖಾಲಿ ಟೆಂಡರ್ ಫಾರಂಗಾಗಿ ಕೋರಿಕೆಯನ್ನು ದಿನಾಂಕ: 22.07.2010 ರ ಸಾಯಂಕಾಲ 4.30 ಘಂಟೆವರೆಗೆ ಕ್ರ.ಸಂ.1 ಮತ್ತು 5 ರ ಕಾಮಗಾರಿಗಳಿಗೆ ಫಾರಂ ಶುಲ್ಕ ರೂ. 500/– + ತೆರಿಗೆ ಹಾಗು ಉಳಿಕೆ ಕಾಮಗಾರಿಗಳಿಗೆ ರೂ. 2000/– + ತೆರಿಗೆ ಡಿಡಿಯೊಂದಿಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

2. ಖಾಲಿ ಟೆಂಡರ್ ಫಾರಂಗಳನ್ನು ಪ್ರಕಟಣೆಯ ದಿನಾಂಕದಿಂದ ದಿ: 22.07.2010 ರ ಸಾಯಂಕಾಲ 04.30 ಘಂಟೆವರೆಗೆ ವಿತರಿಸಲಾಗುವುದು.

3. ಭರ್ತಿ ಮಾಡಿದ ಮೂಲ ಮತ್ತು ನಕಲು ಟೆಂಡರ್ ಫಾರಂಗಳನ್ನು ದಿ: 23.07.2010 ರ ಸಾಯಂಕಾಲ 4.30 ಘಂಟೆಯೊಳಗಾಗಿ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಟೆಂಡರ್‌ಗಳನ್ನು ಸಾಧ್ಯವಾದರೆ ಅದೇ ದಿನ ಅಥವಾ ಮುಂದಿನ ದಿನಗಳಲ್ಲಿ ಹಾಜರಿರುವ ಗುತ್ತಿಗೆದಾರರ ಸಮಕ್ಷಮದಲ್ಲಿ ತೆರೆಯಲಾಗುವುದು.

4. ಇ.ಎಂ.ಡಿ. ಹಣಕ್ಕೆ ಪೌರಾಯುಕ್ತರ ಹೆಸರಿನಲ್ಲಿ ಡಿ.ಡಿ. ಖರೀದಿಸಿ ಲಗತ್ತಿಸುವುದು ಪ್ರತಿ ಕಾಮಗಾರಿಗೆ ಪ್ರತ್ಯೇಕವಾಗಿ ಇ.ಎಂ.ಡಿ ಹಣವನ್ನು ಸಲ್ಲಿಸತಕ್ಕದ್ದು ಇಲ್ಲವಾದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

5. ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಕಾಮಗಾರಿಗಳಿಗೆ ಸಂಬಂಧಿಸಿದ ಸ್ಥಳಗಳನ್ನು ಮತ್ತು ಅಂದಾಜು ಪತ್ರಗಳನ್ನು ಪೂರ್ವಭಾವಿಯಾಗಿ ಪರಿಶೀಲಿಸಿಕೊಂಡು ಟೆಂಡರ್ ದರಪಟ್ಟಿ ಸಲ್ಲಿಸತಕ್ಕದ್ದು. ಆನಂತರ ತಕರಾರಿಗೆ ಅವಕಾಶವಿರುವುದಿಲ್ಲ. ಟೆಂಡರ್‌ದಾರರು ಲೋಕೋಪಯೋಗಿ ಇಲಾಖೆ ಹಾಗು ಆರ್ಥಿಕ ಇಲಾಖೆಯ K/W-1 ರಂತೆ ಟೆಂಡರ್ ಸಲ್ಲಿಸುವುದು ಹಾಗು ನಮೂದಾಗಿರುವ ಎಲ್ಲಾ ಷರತ್ತುಗಳಿಗೂ ಬದ್ದರಾಗಿ ಟೆಂಡರ್‌ನ್ನು ಸಲ್ಲಿಸುವುದು.

6. ಟೆಂಡರ್‌ದಾರರು ಟೆಂಡರ್ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

7. ಟೆಂಡರ್‌ದಾರರು ಟೆಂಡರ್ ಲಕೋಟೆಯ ಮೇಲೆ ಟೆಂಡರ್ ಕ್ರಮ ಸಂಖ್ಯೆ ಮತ್ತು ಕಾಮಗಾರಿ ಹೆಸರನ್ನು ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು ಹಾಗೂ ಗುತ್ತಿಗೆದಾರರು ತಮ್ಮ ಪೂರ್ಣ ಅಂಚೆ ವಿಳಾಸವನ್ನು ಟೆಂಡರ್ ಲಕೋಟೆ ಮತ್ತು ಟೆಂಡರ್ ದರ ಪಟ್ಟಿಯಲ್ಲಿ ತಪ್ಪದೇ ಬರೆಯತಕ್ಕದ್ದು.

8. ಟೆಂಡರ್ ಮಂಜೂರಾತಿ ಪಡೆದ ಗುತ್ತಿಗೆದಾರರು ನಗರಸಭೆಯ ಪೌರಾಯುಕ್ತರು, ಅಭಿಯಂತರರು ನೀಡುವ ಸಲಹೆ ಮತ್ತು ತಾಂತ್ರಿಕ ನಿಯಮದಂತೆ ಕಾಮಗಾರಿ ನಿರ್ವಹಿಸಲು ಬದ್ದರಾಗಿರತಕ್ಕದ್ದು.

9. ಕಾಮಗಾರಿ ನಿರ್ವಹಣೆಗೆ ಪಾವತಿಸಲಾಗುವ ಬಿಲ್ಲು ಮೊಬಲಗಿನ ನಂತರ ಬರಬಹುದಾದ ಯಾವುದೇ ಆಡಿಟ್ ಆಕ್ಷೇಪಣೆಗೆ ಗುತ್ತಿಗೆದಾರರನ್ನೇ ನೇರವಾಗಿ ಹೊಣೆಗಾರರನ್ನಾಗಿ ಗುರಿಪಡಿಸಲಾಗುತ್ತದೆ ಇದಕ್ಕೆ ಬದ್ದರಾಗಿರತಕ್ಕದ್ದು.

10. ಮಂಜೂರಾತಿ ಪಡೆದ ಗುತ್ತಿಗೆದಾರರು ನಿಗಧಿಪಡಿಸಿದ ಕಾಲಾವಧಿಯಲ್ಲಿ ಕಾಮಗಾರಿಯನ್ನು ನಿರ್ವಹಿಸದಿದ್ದಲ್ಲಿ ಅಂತಹ ಗುತ್ತಿಗೆದಾರರ ಬಗ್ಗೆ K/W-1 ರಲ್ಲಿ ನಮೂದಿಸಿರುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡ ನಂತರ ಸ್ಥಳದಲ್ಲಿ ಉಳಿಯಬಹುದಾದ ಅನುಪಯುಕ್ತ ಸಾಮಾಗ್ರಿಗಳನ್ನು ಅಭಿಯಂತರರ ಸೂಚನೆಯಂತೆ ತೆಗೆದುಹಾಕಿಸಿ ಸ್ವಚ್ಛಗೊಳಿಸಲು ಗುತ್ತಿಗೆದಾರರು ಬದ್ದರಾಗಿರತಕ್ಕದ್ದು.

11. ಟೆಂಡರ್ ಮಂಜೂರಾತಿಯು ನಗರಸಭೆ ಕಾಯ್ದೆ ಹಾಗು ನಿಯಾಮಾವಳಿಯಂತೆ ಕಾಯ್ದಿರಿಸಲಾಗಿದೆ.

12. ಟೆಂಡರ್ ಮಂಜೂರಾತಿಯಾದ ಗುತ್ತಿಗೆದಾರರು 100/– ರೂ ಛಾಪಾ ಕಾಗದದ ಮೂಲಕ ಮುಚ್ಚಳಿಕೆ ಸಲ್ಲಿಸಿ ಒಂದು ವಾರದಲ್ಲಿ ಸಂಬಂಧಿಸಿದ ಅಭಿಯಂತರರುಗಳಿಂದ ಕಾಮಗಾರಿ ನಿರ್ವಹಣ ಸ್ಥಳವನ್ನು ಗುರ್ತು ಮಾಡಿಸಿಕೊಂಡು ಕಾಮಗಾರಿ ಪ್ರಾರಂಭಿಸತಕ್ಕದ್ದು ತಪ್ಪಿದಲ್ಲಿ ಠೇವಣಿ ಹಣವನ್ನು ನಗರಸಭೆಗೆ ಅಮಾನತ್ತುಗೊಳಿಸಿ ಈ ಕಾಮಗಾರಿ ನಿರ್ವಹಣೆಯಿಂದ ಉಂಟಾಗಬಹುದಾದ ನಷ್ಟ ಮತ್ತು ತುಷ್ಠಿಗಳಿಗೆ ಟೆಂಡರ್‌ದಾರರೇ ನೇರ ಹೊಣೆಗಾರರಾಗಿರುತ್ತಾರೆ. ಅಂತಹ ಗುತ್ತಿಗೆದಾರರುಗಳ ವಿರುದ್ಧ ಅಗತ್ಯ ಶಿಸ್ತಿನ ಕ್ರಮಕೈಗೊಳ್ಳಲಾಗುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಳ್ಳಲಾಗಿದೆ.

13. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ, ಹಿಂತೆಗೆದುಕೊಳ್ಳುವ ಅಥವಾ ರದ್ದು ಪಡಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

14. ಪೂರ್ಣಗೊಂಡ ಕಾಮಗಾರಿಯ ಅಂತಿಮ ಬಿಲ್ ಪಾವತಿಸಿದ ದಿನಾಂಕದಿಂದ ಮುಂದುವರೆದಂತೆ ಕಾಮಗಾರಿಯ ನಿರ್ವಹಣೆಯನ್ನು 2 ವರ್ಷದ ಅವಧಿಯವರೆಗೆ ಗುತ್ತಿಗೆದಾರರೇ ಯಾವುದೇ ವೆಚ್ಚ ನಿರೀಕ್ಷಿಸದೆ ನಿರ್ವಹಿಸತಕ್ಕದ್ದು

15. ಬಿಲ್ಲುಗಳಲ್ಲಿ ಸರ್ಕಾರ ಸೂಚಿಸಿರುವ ತೆರಿಗೆಗಳನ್ನು ಕಟಾಯಿಸಲಾಗುವುದು.

16. ಟೆಂಡರ್ ನಿಗಧಿತ ಷೆಡ್ಯೂಲ್ ದರಗಳಿಗಿಂತ ಕಡಮೆ ದರ ನಮೂದಿಸುವ ಗುತ್ತಿಗೆದಾರರು ಅಂತಹ ವ್ಯತ್ಯಾಸದ ಮೊತ್ತವನ್ನು ಡಿ.ಡಿ. ಮೂಲಕ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು ಮತ್ತು ನಿಗಧಿತ ವ್ಯತ್ಯಾಸದ ಮೊತ್ತಕ್ಕಿಂತ ಕಡಿಮೆ ಡಿ.ಡಿ. ಇದ್ದ ಪಕ್ಷದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.

17. ಕೆಲಸ ಪೂರ್ಣಗೊಂಡ ನಂತರ ಕಾಮಗಾರಿಯ ಗುಣಮಟ್ಟದ ಬಗ್ಗೆ ಮೂರನೇ ವ್ಯಕ್ತಿಯಿಂದ (Third Party Inspection) ಪರಿಶೀಲಿಸಿದ ನಂತರ ವರದಿ ಆಧಾರದ ಮೇಲೆ ಬಿಲ್‌ನ್ನು ಪಾವತಿಸಲಾಗುವುದು.

18. ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಬಿಲ್ ಪಾವತಿಸಲಾಗುವುದು

19. ಗುತ್ತಿಗೆದಾರರೇ ತಮ್ಮ ಸ್ವಂತ ಖರ್ಚಿನಿಂದ ಕಾಮಗಾರಿಗೆ ಉಪಯೋಗಿಸುವ ಸಾಮಾಗ್ರಿಗಳ ಗುಣಮಟ್ಟದ ಬಗ್ಗೆ ಪರಿಶೀಲನಾ ವರದಿಯನ್ನು ಸಲ್ಲಿಸಲು ಬದ್ಧರಾಗಿರತಕ್ಕದ್ದು.

20. ಸರ್ಕಾರದ ಆದೇಶ ಸಂಖ್ಯೆ ಎಲ್.ಡಿ/300/ಎಲ್.ಇ.ಟಿ/2006, ದಿ: 28.2.007 (ತಿದ್ದು ಪಡಿ)ರಂತೆ ಕಟ್ಟಡ ಮತ್ತು ಇತರೆ ನಿರ್ಮಾಣದ ಕಾರ್ಮಿಕರ ಕಲ್ಯಾಣ ನಿಧಿಗಾಗಿ ಕರ (ಸೆಸ್) ಶೇ. 1 ರಷ್ಟನ್ನು ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸುವ ದರಕ್ಕೆ ಸೇರಿಸತಕ್ಕದ್ದು. ಬಿಲ್ ಪಾವತಿ ವೇಳೆಯಲ್ಲಿ ಶೇ. 1 ರಷ್ಟು ಮೊಬಲಗನ್ನು ಕಟಾಯಿಸಲಾಗುವುದು.

21. ರಾಮನಗರ ನಗರಸಭೆಯಲ್ಲಿ ಕಾಮಗಾರಿ ಆದೇಶ ಪಡೆದು ನಿಗಧಿತ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸದೆ ಇರುವ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ.

22. ಹೆಚ್ಚಿನ ವಿವರಗಳನ್ನು ಹಾಗು ಕಾಮಗಾರಿಗಳ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಅಥವಾ ನಗರಸಭೆ ವೆಬ್ ಸೈಟ್ www.ramanagaracity.gov.in ರಲ್ಲಿ ಪಡೆಯಬಹುದಾಗಿದೆ.

| ಕ.ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ (ಲಕ್ಷರೂ. ಗಳಲ್ಲಿ) | ಇ.ಎಂ.ಡಿ ಮೊತ್ತ | ಕೆಲಸ ಪೂರ್ಣಗೊಳಿಸುವ ಅವಧಿ |
|---|---|---|---|---|
| 1 | ರಾಮನಗರ ನಗರಸಭಾ ವ್ಯಾಪ್ತಿಯ ನೆಹರು ವಾಟರ್ ಟ್ಯಾಂಕ್ ಸರ್ಕಲ್ ಬಳಿ ಎಂ.ಜಿ.ರಸ್ತೆಗೆ, ಹಳೇ ಬಿ.ಎಂ.ರಸ್ತೆಗೆ ಸ್ವಾಗತಗಳ ಸ್ಥಂಭ ನಿರ್ಮಾಣ. | 0.50 | 1250.00 | 60 ದಿನಗಳು |
| 2 | ವಾರ್ಡ್.ನಂ.11 ರ ಗೌಸಿಯ ನಗರದ ಹೆಚ್.ಮುನೀರ್ ಮನೆಯಿಂದ ರಿಯಾಜ್ ಮನೆವರೆಗೆ ಕಾಂಕ್ರೀಟ್ ರಸ್ತೆ ಮತ್ತು ಒಂದು ಬದಿಯಲ್ಲಿ ಕಾಂಕ್ರೀಟ್ ಚರಂಡಿ ನಿರ್ಮಾಣ ಹಾಗು ಯು.ಜಿ.ಡಿ ಮ್ಯಾನ್ ಹೋಲ್ ದುರಸ್ಥಿ ಪಡಿಸುವುದು. | 3.25 | 8125.00 | 60 ದಿನಗಳು |
| 3 | ವಾರ್ಡ್.ನಂ.27 ರ ದೇವರಾಜ್ ಮನೆಯಿಂದ ಮಾಗಡಿ ರಸ್ತೆವರೆಗೆ (ಶರತ್ ಸ್ಕೂಲ್ ಪಕ್ಕ) ಚರಂಡಿ ಮತ್ತು ಕಾಂಕ್ರೀಟ್ ರಸ್ತೆ ನಿರ್ಮಾಣ. | 6.85 | 17125.00 | 60 ದಿನಗಳು |
| 4 | ವಾರ್ಡ್.ನಂ.29 ರ 5 ನೇ ಅಡ್ಡರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಅಳವಡಿಸುವ ಕಾಮಗಾರಿ. | 4.90 | 12250.00 | 60 ದಿನಗಳು |
| 5 | ರಾಮನಗರ ನಗರಸಭಾ ವ್ಯಾಪ್ತಿಯ ನೆಹರು ವಾಟರ್ ಟ್ಯಾಂಕ್ ಸರ್ಕಲ್ ಬಳಿ ಎಂ.ಜಿ.ರಸ್ತೆಗೆ, ಹಳೇ ಬಿ.ಎಂ.ರಸ್ತೆಗೆ ಸ್ವಾಗತಗಳ ಸ್ಥಂಭಕ್ಕೆ ವಿದ್ಯುತ್ ದೀಪದ ವ್ಯವಸ್ಥೆ ಕಲ್ಪಿಸುವುದು. | 1.20 | 3000.00 | 60 ದಿನಗಳು |
| SFC UT (ಶೇ. 22.75) (2009-10) | | | | |
| 6 | ಸ್ವಂತ ಮನೆ ಹೊಂದಿರುವ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರ ಮನೆಗಳಿಗೆ ಶೌಚಾಲಯ ನಿರ್ಮಾಣ ಹಾಗು ಯು.ಜಿ.ಡಿ ಸಂಪರ್ಕ ಕಲ್ಪಿಸುವುದು. | 3.00 | 7500.00 | 60 ದಿನಗಳು |

| | | | |
|---|---|---|---|
| ಸಹಿ/- | ಸಹಿ/- | ಸಹಿ/- | ಸಹಿ/- |
| **(ಸಿದ್ದರಾಜು)** | **(ಹಸೀನಾ ಬಾನು)** | **(ನಾಸೀರ್ ಆಲಿಬೇಗ್)** | **(ಚಿಕ್ಕವೀರೇಗೌಡ)** |
| **ಪೌರಾಯುಕ್ತರು** | **ಉಪಾಧ್ಯಕ್ಷರು** | **ಸ್ಥಾಯಿ ಸಮಿತಿ ಅಧ್ಯಕ್ಷರು** | **ಅಧ್ಯಕ್ಷರು** |
| **ನಗರಸಭೆ,ರಾಮನಗರ** | **ನಗರಸಭೆ, ರಾಮನಗರ** | **ನಗರಸಭೆ, ರಾಮನಗರ** | **ನಗರಸಭೆ,ರಾಮನಗರ** |